**ಸಿ.ಸಿ. ಸಂಖ್ಯೆ: 187/2020**

**ಸಿ.ಡಬ್ಲ್ಯು.1**

**ದಿನಾಂಕಃ 09.04.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ವಿ.ಎನ್.ಬಿ ರವರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಆರೋಪಿಯು ಲೋನ್ ಕೇಳಲು ಬಂದ ದಿನಾಂಕ ನೆನಪಿಲ್ಲ. ಆರೋಪಿಯು ಹಣ ಕೇಳಿದ 8 ದಿನಗಳ ನಂತರ ಹಣ ಕೊಟ್ಟಿರುತ್ತೇನೆ. ಹಣ ಕೊಟ್ಟ ನಂತರ ಒಂದು ವರ್ಷಕ್ಕೆ ಚೆಕ್ಕನ್ನು ಕೊಟ್ಟಿರುತ್ತಾರೆ. ಚೆಕ್ಕನ್ನು ನಗಧೀಕರಿಸಲು ಪ್ರಗತಿ ಕೃಷಿ ಗ್ರಾಮೀಣ ಬ್ಯಾಂಕ್, ಬಶೆಟ್ಟಿಹಳ್ಳಿಯಲ್ಲಿ ಸಲ್ಲಿಸಿರುತ್ತೇನೆ. ಚೆಕ್ ಜೊತೆ ಒಂದು ಚಲನ್ ಬರುತ್ತದೆ ಎಂದರೆ ಸರಿ. ಚಲನನ್ನು ನಾನೇ ಬರೆದಿರುತ್ತೇನೆ. ಚೆಕ್ ಹಾಕಿದ ಒಂದೂವರೆ ತಿಂಗಳ ನಂತರ ಬ್ಯಾಂಕಿನಿಂದ ಹಿಂಬರಹ ನೀಡಿರುತ್ತಾರೆ. ಬ್ಯಾಂಕಿನವರು ಖಾತೆಯಲ್ಲಿ ಹಣ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ.

ನಂತರ ನೋಟೀಸ್ ಕೊಟ್ಟಿರುತ್ತೇನೆ, ಆದರೆ ದಿನಾಂಕ ನೆನಪಿರುವುದಿಲ್ಲ. ಲೀಗಲ್ ನೋಟೀಸ್ ಆರೋಪಿಗೆ ತಲುಪಿರುತ್ತದೆ. ನೋಟೀಸ್ ಕೊಟ್ಟ ನಂತರ ಆರೋಪಿಯು ಹಣ ಕೊಡುವುದಾಗಿ ಹೇಳಿಲ್ಲ, ನಾನು ಭೇಟಿ ಮಾಡಿರುತ್ತೇನೆ. 5 ಲಕ್ಷ ಹಣದಲ್ಲಿ ಒಂದು ಲಕ್ಷ ಬ್ಯಾಂಕಿನಿಂದ ಸಾಲ ಮಾಡಿ ಆರೋಪಿಗೆ ಕೊಟ್ಟಿರುತ್ತೇನೆ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಚಿಕ್ಕಬಳ್ಳಾಪುರದ ಎಸ್‌ಬಿಎಂ ಬ್ಯಾಂಕಿನಲ್ಲಿ ಒಂದು ಲಕ್ಷ ಸಾಲ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬ್ಯಾಂಕಿನಿಂದ ಸಾಲ ಮಾಡಿ ಆರೋಪಿಗೆ ಕೊಟ್ಟಿರುವುದಾಗಿ ನಾನು ಹೇಳಿಲ್ಲ. ನಮ್ಮದು ದೊಡ್ಡ ಕುಟುಂಬ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಎಲ್ಲರೂ ಸಂಪಾದನೆ ಮಾಡುತ್ತಾರೆ.

ನನ್ನ ಮಕ್ಕಳು ಸರ್ಕಾರಿ ಕಾಲೇಜಿನಲ್ಲಿ ಸೇರಿಸಿರುವುದ್ದರಿಂದ ಹೆಚ್ಚಿನ ಖರ್ಚು ಆಗುವು ದಿಲ್ಲ. ನಿ.ಪಿ. 1 ರಲ್ಲಿನ ಬರವಣಿಗೆ ಆರೋಪಿಯೇ ಬರೆದಿರುತ್ತಾರೆ. ನನ್ನ ಸಮಕ್ಷಮದಲ್ಲಿ ಬರೆ

ದಿರುವುದಿಲ್ಲ. ಆರೋಪಿಯು ಬರೆದುಕೊಂಡು ಬಂದು ಕೊಟ್ಟಿರುತ್ತಾರೆ. ಚೆಕ್ಕನ್ನು ಕೊಟ್ಟಾಗ ಬೇರೆ ಯಾರು ಇರಲಿಲ್ಲ. ಆರೋಪಿಯು ನನಗೆ ಚೆಕ್ಕನ್ನು ಕೊಟ್ಟಿಲ್ಲ, ನಾನು ಬ್ಯಾಂಕಿಗೆ ಚೆಕ್ಕನ್ನು ಹಾಕುವ 4-5 ವರ್ಷಗಳ ಮೊದಲೇ ಅವರ ಖಾತೆ ಕ್ಲೋಸ್ ಆಗಿದೆ ಎಂದರೆ ಸರಿಯಲ್ಲ. ಆರೋಪಿಯು ಬ್ಯಾಂಕಿನಲ್ಲಿ ತಮ್ಮ ಖಾತೆಯನ್ನು ಕ್ಲೋಸ್ ಮಾಡಿ ನಂತರ ಚೆಕ್ಕನ್ನು ನನಗೆ ಕೊಟ್ಟಿರುತ್ತಾರೆ. 2 ವರ್ಷಗಳ ಹಿಂದೆ ಆರೋಪಿ ಚೆಕ್ಕನ್ನು ಕೊಟ್ಟಿರುತ್ತಾರೆ. ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ, ಆರೋಪಿಯು ನನಗೆ ಯಾವುದೇ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

Sd/-
(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು
ಜೆಎಂಎಫ್‌ಸಿ, ಶಿಡ್ಲಘಟ್ಟ.